# ಕನ್ನಡದ ಓದು ಮತ್ತು ಅಭಿವ್ಯಕ್ತಿಯನ್ನು ವಿಸ್ತರಿಸುವ ಎಲ್. ಎನ್ ಮುಕುಂದರಾಜ್ ಅವರ ಬರಹಗಳು

**ಡಾ. ರಘುನಂದನ್ ಬಿ. ಆರ್**
**(ಬೇಲೂರು ರಘುನಂದನ್)**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿಜಯನಗರ, ಬೆಂಗಳೂರು.
beluru352raghunandan@gmail.com

ಓದು ಎನ್ನುವುದು ಭೂತ, ವರ್ತಮಾನ ಹಾಗೂ ಭವಿಷ್ಯತ್ತನ್ನು ಏಕಕಾಲಕ್ಕೆ ಒಳಗೊಳ್ಳುವ ಒಂದು ಮಹತ್ವದ ಕ್ರಿಯೆ. ಓದು ನಮ್ಮ ನಡುವಿನ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ಕಲಾತ್ಮಕ ಹಾಗೂ ಇನ್ನಿತರ ಅನೇಕ ಆಯಾಮಗಳಲ್ಲಿ ಎದುರಾಗುವ ಅಭಿವ್ಯಕ್ತಿಗಳ ಜೊತೆಗೆ ಮಾಡುವ ಸಂವಾದವಾಗಿದೆ. ಓದಿಗೆ ಇರುವ ಆಯಾಮಗಳು ಅನೇಕ. ಓದಿನ ಸುಖಕ್ಕೆ ಇರುವ ಆಯಾಮಗಳು ಕೂಡ ಬಹುತೇಕ ಭಿನ್ನ. ಹೀಗೆ ಓದಿಗಿರುವ ಭಿನ್ನ ಸಾಧ್ಯತೆಯೊಳಗೆ ಕೃತಿಯೊಳಗೆ ಪ್ರವೇಶ ಮಾಡಿ ಅದನ್ನು ವಿಮರ್ಶೆ ಮಾಡಿ ಮುನ್ನುಡಿ ಬರೆಯುವ ಪರಂಪರೆ ಬಹಳ ಹಿಂದಿನದ್ದು. ಮುನ್ನುಡಿಯ ಮೂಲಕ ಕೃತಿಯನ್ನು ಸಮಗ್ರವಾಗಿ ವಿಶ್ಲೇಷಣೆ ಮಾಡಿ ವಿಮರ್ಶಿಸುವ ಬಗೆಯೊಂದಿದ್ದರೆ ಮತ್ತೊಂದು ಬಗೆ ಕೃತಿಯ ಸಾಧ್ಯತೆಗಳನ್ನು ಲೋಕಕ್ಕೆ ಪರಿಚಯಾತ್ಮಕವಾಗಿ ತಿಳಿಸಿ, ಆ ಕೃತಿಯನ್ನು ಸಹೃದಯ ಪ್ರಪಂಚ ಓದುವಂತೆ ಮಾಡುವುದು ಕೂಡ ಮತ್ತೊಂದು ಬಗೆಯಾಗಿದೆ. ಈ ಎರಡು ಸಾಧ್ಯತೆಗಳು ಕನ್ನಡದ ಪುಸ್ತಕ ಪ್ರಪಂಚವನ್ನು ಬೇರೆ ಬೇರೆ ನೆಲೆಗಳ ಒಳಗೆ ಕನ್ನಡ ಲೋಕಕ್ಕೆ ತಲುಪಿಸುವುದೇ ಆಗಿದೆ. ಈ ದೃಷ್ಟಿಯಲ್ಲಿ ಕನ್ನಡದ ಬಹಳ ಮುಖ್ಯ ಕವಿಗಳು, ನಾಟಕಕಾರರು ಹಾಗೂ ಅಧ್ಯಾಪಕರಾಗಿರುವ ಎಲ್.ಎನ್ ಮುಕುಂದರಾಜು ಅವರು ಕನ್ನಡ ಕಟ್ಟಿದ ಬಗೆಗಳಲ್ಲಿ, ಅವರು ಬರೆದ ಹಿರಿ–ಕಿರಿ ತಲೆಮಾರಿನ ಲೇಖಕರಿಗೆ ಬರೆದ ಮುನ್ನುಡಿಗಳು ಕೂಡ ಸೇರಿವೆ.

ಯಾರಿಗೂ ಬಿಡುವಿಲ್ಲದ ಒತ್ತಡಗಳಲ್ಲಿ ಸಿಲುಕಿಕೊಂಡಿರುವ ಈ ಕಾಲದಲ್ಲಿ, ಓದು ಎನ್ನುವುದು ತೀರ ವೈಯಕ್ತಿಕವಾಗಿದೆ. ಆ ವೈಯಕ್ತಿಕತೆಯೊಳಗೆ ರಾಜಕಾರಣ ಮತ್ತು ಹಿತಾಸಕ್ತಿಗಳೂ ಸೇರಿಕೊಂಡಿವೆ. ಓದಿನ ಆಯ್ಕೆಗಳು ತೀರ ಪಕ್ಕಕ್ಕೆ ಸರಿದು, ಓದುಗರೆಲ್ಲ ನೋಡುಗರಾಗಿ, ಕೇಳುಗರಾಗಿ ಪರಿವರ್ತನೆಯಾದ ಸಾಹಿತ್ಯಕ ಸಮಾಜದೊಳಗೆ ಇಂದು ಪುಸ್ತಕವೊಂದನ್ನು ಪ್ರೀತಿಯಿಂದ, ಆಪ್ತತೆಯಿಂದ ಮತ್ತು ಬದ್ಧತೆಯಿಂದ ಓದುವ ಕ್ರಿಯೆ ತೀರ ಅಂಚಿಗೆ ಸರಿದು ಬಿಟ್ಟಿದೆ. ಅಧ್ಯಯನಕ್ಕಾಗಿ ಓದುವ ಸಹೃದಯರ ಸಂಖ್ಯೆ ತೀರ ಕಡಿಮೆಯಾಗುತ್ತಿರುವುದು ಲೋಕಕ್ಕೆ ಗೊತ್ತಿರದ ವಿಷಯವೇನಲ್ಲ. ಇದೆಲ್ಲದರ ನಡುವೆ ಹೊಸ ಕೃತಿಯೊಂದನ್ನು ಬರೆದ ಲೇಖಕ, ಮತ್ತೊಬ್ಬ ಲೇಖಕನಿಂದ ತನ್ನ ಕೃತಿಯನ್ನು ಕುರಿತಾಗಿ

DOI: 10.59176

ಮುನ್ನುಡಿ ಬರೆಸಿ ಪುಸ್ತಕ ಪ್ರಕಟಿಸುವುದು ಹಿಂದಿನಿಂದಲೂ ಬಂದ ರೂಢಿ. ಅನೇಕ ಸಾಹಿತ್ಯಾಸಕ್ತರು, ಓದುಗ ಬಂಧುಗಳು ಕೃತಿಯ ಮುನ್ನುಡಿಗಳನ್ನು ಹಾಗೂ ಬೆನ್ನುಡಿಗಳನ್ನು ಓದಿ ಆ ಕೃತಿಯನ್ನು ಸಂಪೂರ್ಣವಾಗಿ ಓದುವ ಮನಸ್ಸು ಮಾಡುವುದನ್ನು ನಾವು ಗಮನಿಸಿದ್ದೇವೆ. ಆದರೆ ಇತ್ತೀಚಿನ ವಿದ್ಯಾಮಾನವನ್ನು ನೋಡಿದಾಗ ಮುನ್ನುಡಿ–ಬೆನ್ನುಡಿಗಳನ್ನು ಓದಿ, ಪುಸ್ತಕದಲ್ಲಿ ಏನಿದೆ ಎಂಬ ಸ್ವಯಂ ತಿಳುವಳಿಕೆಯಿಂದ ಪುಸ್ತಕವನ್ನೇ ಸಂಪೂರ್ಣವಾಗಿ ಓದದ ಸಂದರ್ಭಗಳು ಕೂಡ ಹೆಚ್ಚಾಗಿವೆ. ಮುನ್ನುಡಿ ಬೆನ್ನುಡಿಗಳನ್ನು ಓದಿ ಪುಸ್ತಕಗಳನ್ನು ಕೊಳ್ಳುವ, ಕೊಳ್ಳದೇ ಇರುವ ಸ್ಥಿತಿ ಕೂಡ ಈ ಹೊತ್ತಿನ ಪುಸ್ತಕ ಮಾಧ್ಯಮ ಎದುರಿಸುತ್ತಿದೆ. ಈ ದೃಷ್ಟಿಯಲ್ಲಿ ಮುನ್ನುಡಿಗಳ ಪರಂಪರೆಗೆ ರಾಜಕರಾಣವಾಗಿ ಶಕ್ತಿ ಹಾಗೂ ಮಿತಿಯಾಗಿ ನೆಲೆಗಳಲ್ಲಿ ಪ್ರಕಟಗೊಂಡಿವೆ.

ಈ ಹಿನ್ನೆಲೆಯಲ್ಲಿ ಮುಕುಂದರಾಜು ಅವರ ಮುನ್ನುಡಿಗಳನ್ನು ಗಮನಿಸಿದರೆ ಕೃತಿ ಹಾಗೂ ಕೃತಿಕಾರನ ಬಗ್ಗೆ ತಾತ್ವಿಕವಾದ ನಿಲುವುಗಳನ್ನು ತಳೆಯುತ್ತಾ, ಹಿತಾಸಕ್ತಿಗಳಿಲ್ಲದೆ ಸಾಹಿತ್ಯಕ ಧೋರಣೆ ಮತ್ತು ಆಯಾಮಗಳಿಂದಲೇ ಓದುಗಲೋಕ ಎದುರಾಗುವಂತೆ ಮಾಡುತ್ತದೆ. ಇದು ಮುಕುಂದರಾಜು ಅವರ ಪುಸ್ತಕ ಪರಿಚಯದ ಪರಿ. ಕೆಲವು ಕಡೆ ಪರಿಚಯಾತ್ಮಕವಾಗಿ ಮತ್ತೆ ಕೆಲವು ಕಡೆ ಸಾರಾಂಶೀಕರಿಸಿ ಇನ್ನೂ ಕೆಲವು ಕಡೆ ವಿಶ್ಲೇಷಣೆ–ವಿಮರ್ಶೆಗೆ ಒಳಪಡಿಸಿ ತನ್ನ ನಿಲುವುಗಳನ್ನು ಸ್ಪಷ್ಟಪಡಿಸುವ ಪ್ರತಿಕ್ರಿಯಾತ್ಮಕ ಬರಹಗಳು ಮುಕುಂದರಾಜು ಅವರ ಮುನ್ನುಡಿಗಳ ಪ್ರವೇಶಿಕೆಗಳಲ್ಲಿ ಸೇರಿವೆ. ಕೃತಿಯ ಮಹತ್ವ ಮತ್ತು ಮಿತಿಗಳನ್ನು ತನ್ನ ಅಪಾರ ಓದಿನ ಹಿನ್ನೆಲೆ, ಸಾಂಸ್ಕೃತಿಕ ಜೀವನಾನುಭವ ಹಾಗೂ ಬದ್ಧತೆಯ ಅಧ್ಯಾಪನದಿಂದ ದೊರಕಿದ ಲೋಕಜ್ಞಾನದ ಶಕ್ತಿಯಿಂದ ಕನ್ನಡ ಕೃತಿ ಸಂಪತ್ತನ್ನು ಗ್ರಹಿಸುವ ಮತ್ತದನ್ನು ಲೋಕಕ್ಕೆ ತಲುಪಿಸುವ ದಕ್ಷ, ಸ್ಪಷ್ಟ ತಿಳುವಳಿಕೆ ಹಿರಿಯರಾದ ಮುಕುಂದರಾಜು ಅವರಿಗಿದೆ ಎಂಬುದನ್ನು ಅವರ ಮುನ್ನುಡಿಗಳೇ ಮಾತನಾಡುತ್ತವೆ.

“ಆಧುನಿಕ ತಂತ್ರಜ್ಞಾನದ ಬಲದಿಂದ ತಮ್ಮ ಕೈಗಳಲ್ಲಿರುವ ಮೊಬೈಲ್ ಫೋನ್‌ಗಳ ಮೂಲಕ ಬಹುದೊಡ್ಡ ಚಿಂತನ ಚಳುವಳಿ ನಡೆಯುತ್ತಿದೆ. ಫೇಸ್ಬುಕ್, ವಾಟ್ಸಾಪ್‌ಗಳಲ್ಲಿ ನಿತ್ಯ ನೂರಾರು, ಸಾವಿರಾರು ಜನ ಕಥೆ, ಕವಿತೆ, ವಿಮರ್ಶೆ, ಚಿಂತನೆ ಹೀಗೆ ಎಲ್ಲವನ್ನು ಬರೆಯುತ್ತಿದ್ದಾರೆ. ಹೀಗೆ ಬರೆಯುವವರಲ್ಲಿ ಕಾಲ ಪರಿಪಕ್ವಗೊಂಡ ಸಂದರ್ಭದಲ್ಲಿ ಬರವಣಿಗೆಯ ಪ್ರಾಥಮಿಕ ಲಕ್ಷಣಗಳ ಬಗ್ಗೆ ಅರಿವು ಇಲ್ಲವೆಂಬುದು ಸತ್ಯ ಸಂಗತಿ. ತಮ್ಮ ಪೂರ್ವ ಸಾಹಿತ್ಯದ ಪ್ರಜ್ಞೆ ಅವರಿಗೆ ಇಲ್ಲ. ನಾಡು–ನುಡಿ ಸಂಸ್ಕೃತಿ ಹಾಗೂ ಸಾಮಾಜಿಕ ಇತಿಹಾಸದ ಅರಿವು ಇಲ್ಲ. ಯಾವುದನ್ನು ರೂಪಕಗಳಲ್ಲಿ ಮುಚ್ಚಿಟ್ಟು ಹೇಳಬೇಕು ಎಂಬ ಕೌಶಲವೂ ಇಲ್ಲ. ಯಾವುದು ಎಡೆಯಿಲ್ಲದಂತೆ ಎಲ್ಲರೂ ಎಲ್ಲವನ್ನು ತಕ್ಷಣ ಹೇಳಿಬಿಡುತ್ತಾರೆ.” ತಕ್ಷಣಕ್ಕೆ ಹೇಳುವ ಮತ್ತು ಪ್ರತಿಕ್ರಿಯಿಸುವ ಕಾಲ ಹಾಗೂ ಚಿಂತನೆಗೆ ಎದುರಾಗಬೇಕಿರುವ ಚಳುವಳಿ ಮತ್ತು ಅಗಾಧವಾಗಿ ಸೃಷ್ಟಿಯಾಗುತ್ತಿರುವ ಸಾಹಿತ್ಯ ಈ ಎಲ್ಲವುಗಳನ್ನು ಪರಾಮರ್ಶಿಸಿದಂತೆ ಸೃಜನ ಲೋಕದ ಸಾಹಿತ್ಯ ಕ್ರಿಯೆ ಮತ್ತು ಸಾಂಸ್ಕೃತಿಕ ಪ್ರಕ್ರಿಯೆಯನ್ನು ಕುರಿತು ಅತ್ಯಂತ ಸೂಕ್ಷ್ಮವಾಗಿ ಕಾಲಿಕವಾದ ಮಾತುಗಳನ್ನು ಅತ್ಯಂತ ತಾತ್ವಿಕವಾಗಿ ಹೊಸ ತಲೆಮಾರನ್ನು ಹಾಗೂ ತಂತ್ರಜ್ಞಾನ ಪ್ರಣೀತ ರೂಪಗೊಂಡ ತಲೆಮಾರನ್ನು ಕುರಿತಾಗಿ ಮುಕುಂದರಾಜು ಅವರು ಈ ಹೊತ್ತಿನ ಕೆಲ

DOI: 10.59176
http://www.kristujayantijournal.com/index.php/KJKSP

ಕವಿತೆಗಳನ್ನು ಉದಾಹರಿಸುತ್ತಾ ಮಾತನಾಡುತ್ತಾರೆ. ಈ ಮಾತುಗಳು ಕೇವಲ ಅಭಿಪ್ರಾಯ ರೂಪಿಯಾದ ನಿರೂಪಣೆಯಾಗದೆ ವರ್ತಮಾನದ ಸಾಹಿತ್ಯ ಸೃಷ್ಟಿ, ಭೂತ–ಭವಿತವ್ಯಗಳ ಜೊತೆಗೆ ಹೇಗೆ ಕೊಂಡಿಯಾಗಬೇಕು ಹಾಗೂ ಪರಂಪರೆಯನ್ನು ಹೇಗೆ ಒಳಗೊಳ್ಳಬೇಕು ಎಂಬ ಚಾರಿತ್ರಿಕ ಮಾತುಗಳು ಕೂಡ ಆಗಿವೆ. ಕೃತಿ– ಕೃತಿಕಾರ ಸಾಂಸ್ಕೃತಿಕ ಲೋಕಕ್ಕೆ ಪ್ರವೇಶ ಪಡೆಯಲು ಅತ್ಯಂತ ಮಹತ್ವದ ಮಾತುಗಳಿವು. ಅಭಿಪ್ರಾಯವನ್ನು ಮತ್ತು ವಿಮರ್ಶೆಯನ್ನು ಎದುರುಗೊಳ್ಳದ ಕಾಲದಲ್ಲಿ ಈ ಬಗೆಯ ಗಟ್ಟಿ ಮಾತುಗಳು ಹೊಸ ತಲೆಮಾರಿಗೆ ಅತ್ಯಂತ ಮುಖ್ಯವಾದವು ಎಂಬುದನ್ನು ಗಮನಿಸಬೇಕು. ಹೊಗಳಿಕೆ ಮತ್ತು ಕವಿ ಕೃತಿಯ ಪರವಾದ ಮಾತುಗಳಿಂದಲೇ ಮಿಂದೇಳುತ್ತಿರುವ ಹೊಸ ಕನ್ನಡ ಜಾಯಮಾನಕ್ಕೆ ಮುಕುಂದರಾಜು ಅವರ ಮುನ್ನುಡಿ ರೂಪದಲ್ಲಿ ಹೇಳುವ ಮಾತುಗಳು ಕಲೆ ಮತ್ತು ಸಂಸ್ಕೃತಿಯನ್ನು ರೂಪಿಸಲು ಬೇಕಾದ ಪರಿಕರಗಳಂತೆ ಕಾಣುತ್ತವೆ ಇದು ಕಾಲದ ಅಗತ್ಯ ಮತ್ತು ತುರ್ತು ಆಗಿದೆ.

ಗೋವಿಂದ ರೆಡ್ಡಿ ಅವರ 'ಶೂದ್ರ ದೀವಿಗೆ' ಎಂಬ ನಾಟಕವನ್ನು ಕುರಿತಾಗಿ ಬರೆಯುವಾಗ ಭಾರತೀಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಪಠ್ಯಗಳಲ್ಲಿ ನಿರೂಪಣೆಗೊಂಡಿರುವ ಶೂದ್ರ ಸಂಸ್ಕೃತಿ ಹಾಗೂ ಅಲ್ಲಿನ ಸಂಕಟಗಳ ಸ್ಮೃತಿಗಳನ್ನು ನೆನಪು ಮಾಡಿಕೊಡುವ ನಾಟಕದ ಆಶಯ ಮತ್ತು ಪರಿಣಾಮವನ್ನು ಕುರಿತು ಮುಕುಂದರಾಜು ಅವರು ಅತ್ಯಂತ ಶಕ್ತವಾಗಿ ಪ್ರಸ್ತಾಪಿಸುತ್ತಾರೆ. ವರ್ತಮಾನದ ತರುಣ ಮಿತ್ರರು ಯಾವೆಲ್ಲಾ ಆಮಿಷಗಳಿಗೆ ಎದುರಾಗಿದ್ದಾರೆ ಹಾಗೂ ಇತಿಹಾಸ ಮತ್ತು ಪರಂಪರೆಯನ್ನು ಮರೆತಿದ್ದಾರೆ ಎಂಬ ಉಲ್ಲೇಖವನ್ನು ನಾಟಕದ ಪಠ್ಯವನ್ನು ಒಳಗೊಂಡಂತೆ ಬರೆಯುತ್ತಾರೆ. ಕೃತಿಯಲ್ಲಿರುವ ಸಮಕಾಲಿನ ಸುಡು ವಾಸ್ತವಗಳನ್ನು ಸೂಕ್ಷ್ಮವಾಗಿ ತಮ್ಮ ಮುನ್ನುಡಿಯ ಮಾತುಗಳಲ್ಲಿ ಪರಿಚಯಿಸುತ್ತಾರೆ. ಪತ್ರ ಸಂಸ್ಕೃತಿಯನ್ನು ನೆನಪಿಸುತ್ತ, ಹೊಸಹಳ್ಳಿ ದಾಳೇಗೌಡ ಹಾಗೂ ಧರಣಿಪ್ರಿಯ ಎಂಬ ಇಬ್ಬರು ಕವಿ ಮಿತ್ರರು ಜುಗಲ್ ಬಂದಿ ಕವಿತೆಗಳನ್ನು ಬರೆದಿರುವ ಹಿನ್ನೆಲೆ ಹಾಗೂ ಅದರ ಒಳನೋಟಗಳನ್ನು ಕುರಿತು ಪರಿಚಯಾತ್ಮಕವಾಗಿ ಮುಕುಂದರಾಜು ಅವರು ಕಟ್ಟಿಕೊಡುತ್ತಾರೆ. ಇಲ್ಲಿ ಕಾವ್ಯ ಹುಟ್ಟುವ ಬೆಳೆಯುವ ಮತ್ತು ತಲುಪುವ ಸಾಧ್ಯತೆಗಳ ಸೂಕ್ಷ್ಮ ತಿಳುವಳಿಕೆ ಹಾಗೂ ವಿನ್ಯಾಸದ ಬಗೆಗಿನ ಜ್ಞಾನವನ್ನು ಕುರಿತು ಮಾತನಾಡುವುದು ಮುಖ್ಯವೆನಿಸುತ್ತದೆ. ತ.ನಂ.ಜ್ಞಾನೇಶ್ವರ ಅವರು ಮಹಾಪುರುಷರ ವ್ಯಕ್ತಿ ಚಿತ್ರಗಳನ್ನು ದಾಖಲಿಸಿರುವ ಮಹತ್ವವನ್ನು ಕುರಿತು ಬರೆಯುತ್ತಾ ಕಲ್ಪವನ್ನು ಅಲ್ಪದಲ್ಲಿ ಕಾಣಿಸುವ ಅಗತ್ಯ ಈ ಕಾಲದ್ದು ಕೂಡ ಆಗಿದೆ ಎಂಬುದನ್ನು ಬಹಳ ತಾತ್ವಿಕವಾಗಿ ಮುಕುಂದರಾಜು ಅವರು ತಿಳಿಸಿಬಿಡುತ್ತಾರೆ.

'ಮಕ್ಕಳಿಗಾಗಿ ಪುಟ್ಟ ಮುನ್ನುಡಿ' ಎಂಬ ಬರಹ ನಿಜಕ್ಕೂ ಉತ್ತಮ ಮತ್ತು ಕಾಲದ ಅಗತ್ಯ ಅನಿವಾರ್ಯವಾಗಿದೆ. "ಮಹಾಕವಿ ಕುವೆಂಪು ಅವರಿಗೆ ಮಕ್ಕಳ ಸಾಹಿತ್ಯ ರಚನೆಯು ಮಹಾಕಾವ್ಯ ರಾಮಾಯಣ ದರ್ಶನಂನಷ್ಟೇ ಅತ್ಯಂತ ಮುಖ್ಯವಾದ ಕಾಯಕವಾಗಿತ್ತು" ಎಂಬ ಮಾತನ್ನು ಮುಕುಂದರಾಜು ಅವರು ಉಲ್ಲೇಖಿಸುತ್ತಾ ಮಕ್ಕಳ ಸಾಹಿತ್ಯದ ಮಹತ್ವವನ್ನು ಮತ್ತು ಅನಿವಾರ್ಯತೆಯನ್ನು ಗ್ರಹಿಸಲು ಬೇಕಾದ ಸಾಧ್ಯತೆಗಳನ್ನು ತಮ್ಮ ಬರಹದ ಮೂಲಕ ಲೋಕಕ್ಕೆ ದಾಟಿಸುತ್ತಾರೆ. ನವೋದಯ ಸಾಹಿತಿಗಳು ಮಕ್ಕಳ ಸಾಹಿತ್ಯವನ್ನು ರಚಿಸುತ್ತಾ, ಆ ಮೂಲಕ ನಾಡು ಕಟ್ಟಿದ ಭಾಷೆಯನ್ನು

ಬೆಳೆಸಿದ ಮಹತ್ವದ ವಿಚಾರಗಳನ್ನು ನಮ್ಮ ಮುಂದೆ ಇಡುತ್ತಾರೆ. ಕೌತುಕ, ಕಲ್ಪನೆ, ವೈಚಾರಿಕತೆ, ಕಥನಕ್ರಮ, ಮನೋಭಾವ, ಕಿಶೋರತೆ ಮುಂತಾದ ಶಿಶು ಭಾವಗಳನ್ನು ಹಿಡಿಯುವಲ್ಲಿ ಮಕ್ಕಳ ಸಾಹಿತ್ಯ ಜವಾಬ್ದಾರಿಯುತವಾಗಿ ಕೆಲಸ ಮಾಡಿರುವುದನ್ನು ಕನ್ನಡದ ಅನೇಕ ಹಿರಿ–ಕಿರಿ ಮಕ್ಕಳ ಸಾಹಿತಿಗಳ ಬರಹಗಳಿಗೆ ತಮ್ಮ ತೋರಣ ನಾಂದಿ ಎಂಬಂತೆ ಮುನ್ನುಡಿಯನ್ನು ಬರೆದಿದ್ದಾರೆ. ಶ್ರೇಷ್ಠ ಕವಿಯಾದವನು ಅಥವಾ ಬರಹಗಾರನಾದವನು ಮಕ್ಕಳಿಗಾಗಿ ಬರೆಯಲೇಬೇಕು ಎಂಬ ಸ್ಪಷ್ಟ ನಿಲುವನ್ನು ಸಾಂಸ್ಕೃತಿಕ – ಸಾಮಾಜಿಕ ಜಗತ್ತಿಗೆ ಮುಕುಂದರಾಜು ಅವರು ತಳದಿದ್ದಾರೆ. ಮುಗ್ದತೆಯೊಳಗೆ ಅಡಗಿರುವ ಪ್ರಬುದ್ಧ ಲೋಕವನ್ನು ಅರಿಯಲು ಮಕ್ಕಳ ಸಾಹಿತ್ಯ ರಚನೆ ಮತ್ತು ಓದು ಅಗತ್ಯ ಎಂಬ ಹಲವು ಆಯಾಮಗಳು ಮುಕುಂದರಾಜು ಅವರ ಮುನ್ನುಡಿಯ ಮೂಲಕ ಗ್ರಹಿಸಬಹುದಾಗಿದೆ.

ಜಾಣಗೆರೆ ವೆಂಕಟರಾಮಯ್ಯನವರ ಕಾದಂಬರಿಯನ್ನು ಕುರಿತಾಗಿ ಬರೆದ ಮುನ್ನುಡಿ, ಕೃತಿಯಲ್ಲಿರುವ ದರ್ಶನದ ಜೊತೆಗೆ ಲೋಕಜ್ಞಾನವನ್ನು ಮತ್ತು ವೈಚಾರಿಕ ವಿವೇಕವನ್ನು ನಮ್ಮ ಮುಂದೆ ಇಡುತ್ತದೆ ಎಂಬುದರ ತಾತ್ವಿಕ ನಿರೂಪಣೆ ಮುಕುಂದರಾಜು ಅವರ ಮುನ್ನುಡಿ ಒದಗಿಸುತ್ತದೆ. ಜಲಯುದ್ಧದ ಮೂಲಕ ನೀರಿಗಾಗಿ ನಡೆದ ಕಾಳಗದ ಕಥನವನ್ನು ಮುಂದಿಟ್ಟುಕೊಂಡು ರೂಪುಗೊಂಡ ಕಾದಂಬರಿಯ ಚಿತ್ರಕ ಶಕ್ತಿಯನ್ನು ಪರಿಚಯಿಸುತ್ತಲೇ ರಾಜ ಮತ್ತು ಪ್ರಜೆಗಳನ್ನು ಎದುರಾಗಬೇಕಾದ ಮಾನವೀಯ ಮತ್ತು ಸಾಮಾಜಿಕ ಬದ್ಧತೆಗಳನ್ನು ತಿಳಿಯ ಬಯಸುವ ನೈತಿಕ ಮೀಮಾಂಸೆಯನ್ನು ಮುನ್ನುಡಿಕಾರರು ಗುರುತಿಸಿದ್ದಾರೆ. ಕೃತಿಯನ್ನು ಎದುರಾಗಲು ಬೇಕಾದ ಮಾನಸಿಕ ಎಚ್ಚರ ಮತ್ತು ವೈಚಾರಿಕ ಪ್ರಜ್ಞೆಗಳನ್ನು ಸೃಜನಶೀಲ ಪಠ್ಯ ಆವರಿಸಿಕೊಳ್ಳುವ ಆಯಾಮಗಳನ್ನು ಜಲಯುದ್ದ ಕಾದಂಬರಿಯ ಮೂಲಕ ಲೋಕಕ್ಕೆ ಮುನ್ನುಡಿಕಾರರು ಅರುಹುತ್ತಾರೆ. ಈ ದೃಷ್ಟಿಯಲ್ಲಿ ಕಥನ ಕುತೂಹಲ, ಕಥನ ವಿನ್ಯಾಸ ಮತ್ತು ಕಥಾ ವಸ್ತು ಕೃತಿಯೊಂದರ ಓದಿಗೆ ಬೇಕಾದ ಸಕಲ ರೀತಿಯ ಸಿದ್ಧತೆಗಳನ್ನು ಒದಗಿಸುವಂತೆ ಮುನ್ನುಡಿ ಸಹಕರಿಸುತ್ತದೆ.

ಜಯಶ್ರೀ ಕಂಬಾರ ಅವರ 'ಮಾಧವಿ' ನಾಟಕವನ್ನು ಕುರಿತು "ಸ್ತ್ರೀ ಸಂವೇದನೆ ಎಂಬ ಪಾರಿಭಾಷಿಕ ಶಬ್ದವನ್ನು ಇಲ್ಲಿ ಬಳಸಬಹುದು. ಹೆಣ್ಣಿನ ಆಳದ ಕರುಳ ಸಂಕಟಗಳನ್ನು ನಿರೂಪಿಸುವ ಭಿನ್ನ ನಾಟಕ ಮೈ ತಾಳಿರುವುದನ್ನು ಓದುಗುರು ಸಹಜವಾಗಿ ಗ್ರಹಿಸಬಲ್ಲರು" ತಾಯಿ ಮನಸ್ಸಿನ ತಲ್ಲಣಗಳನ್ನು ಹಾಗೂ ತಾಯ್ತನದ ತಾತ್ವಿಕತೆಯನ್ನು ಮಾಧವಿ ನಾಟಕವನ್ನು ಇಟ್ಟುಕೊಂಡು ಬರೆದಿರುವುದು ಅತ್ಯಂತ ಆಪ್ತ ಹಾಗೂ ಸಶಕ್ತ. ಡಾ. ವಸುಂಧರಾ ಭೂಪತಿ ಅವರು ವಿಜ್ಞಾನ ಮತ್ತು ಸಾಹಿತ್ಯವನ್ನು ಬೆರೆಸಿ ಬರೆಯುವ ಸಮಕಾಲಿನ ಸಂದರ್ಭದಲ್ಲಿ ಬಹಳ ಮುಖ್ಯ ಹೆಸರು. ವೃತ್ತಿಯಲ್ಲಿ ವೈದ್ಯರಾಗಿದ್ದುಕೊಂಡು ಅವರು ಆಪ್ತವಾಗಿ ತೊಡಗಿಸಿಕೊಂಡದ್ದು ಸಾಹಿತ್ಯ ಮತ್ತು ಸಾಂಸ್ಕೃತಿಕ ಜಗತ್ತಿನೊಂದಿಗೆ. ವಿಜ್ಞಾನ ದೀವಿಗೆಗೆ ಕಲಾತ್ಮಕ ತೈಲವನ್ನು ಸುರಿಯುತ್ತಾ ಬೆಳಕನ್ನು ಹಂಚುವ ಲೇಖಕರಲ್ಲಿ ವಸುಂಧರಾ ಭೂಪತಿಯವರು ಅತ್ಯಂತ ಮಂಚೂಣಿಯಲ್ಲಿ ಇರುವ ಲೇಖಕಿ ಎಂಬುದನ್ನು ಗಮನಿಸಬೇಕು. ವಿಜ್ಞಾನ ಮತ್ತು ಸಾಹಿತ್ಯ ಸಂದರ್ಭದಲ್ಲಿ 'ಜೀವ ಸರಪಳಿಯ ಗೂಡು' ಸಂಪಾದಿತ ಕೃತಿ ಮಾತ್ರವಲ್ಲ ವರ್ತಮಾನದ ಕಲೆ–ವಿಜ್ಞಾನಗಳು ಬೆರೆಯಲು ಬೇಕಾದ ಸಂವಹನ ಮಾಧ್ಯಮ ರೂಪ ಎಂಬುದನ್ನು ಸಾರುತ್ತದೆ. ಈ ತಿಳುವಳಿಕೆಯನ್ನು ಮುಕುಂದರಾಜು ಅವರು ತಮ್ಮ ಮುನ್ನುಡಿಯ

DOI: 10.59176
http://www.kristujayantijournal.com/index.php/KJKSP

ಮೂಲಕ ಲೋಕ ಗ್ರಹಿಕೆಗೆ ತಲುಪಿಸುತ್ತಾರೆ. ಮಲ್ಲಿಕಾರ್ಜುನ ಕಡಕೋಳ ಅವರ ಜೀವನ ಅನುಭವವನ್ನು ಎದುರುಗೊಂಡಿರುವ 'ಯಡ್ರಾಮಿ ಸೀಮೆ ಕಥನಗಳು' ಎಂಬ ಶೀರ್ಷಿಕೆಯ ಪುಟ್ಟ, ಬಿಡಿ ಬರಹಗಳಲ್ಲಿರುವ ಮನುಷ್ಯನ ಮನೋಲೋಕದ ಮತ್ತು ವಿಕಾಸ ಹಾದಿಯನ್ನು ಮುಕುಂದರಾಜು ಅವರ ಬರಹ ಅನ್ವೇಷಕ ಮಾರ್ಗದಲ್ಲಿ ಓದುಗನಿಗೆ ತಿಳಿಸಿಕೊಡುತ್ತದೆ. ವ್ಯಕ್ತಿಯೊಬ್ಬನ ಅನುಭವ ಕಥಾನಕಗಳಲ್ಲದೆ ಸಮುದಾಯದ ಕಾಲಪ್ರಜ್ಞೆಯಾಗಿ ಹಾಗೂ ಜಗತ್ತಿನ ಯಾತನಾಮಯ ನೆನಪುಗಳಾಗಿ ಅಕ್ಷರರೂಪ ಪಡೆದು ನಿರೂಪಣೆಗೊಂಡಿರುವ ಕೃತಿ ಎಂಬ ತಾತ್ವಿಕತೆಯನ್ನು ಮುನ್ನುಡಿಕಾರರು ಕೃತಿಪರಿಚಯವನ್ನು ಮಾಡಿ ಕೊಡುವುದರಲ್ಲಿ ತೋರಿರುವ ವ್ಯಕ್ತಿ ಹಾಗೂ ಸಮುದಾಯ ಪ್ರಜ್ಞೆ ಬೆಸೆದುಕೊಂಡಿರುವ ತತ್ವ ಓದುಗರಾದ ನಮಗೂ ಕಾಣುತ್ತದೆ. ಸಾಮಾಜಿಕ ಹೋರಾಟ, ರಂಗಭೂಮಿ, ಧರ್ಮ, ರಾಜಕಾರಣ, ಭೂಗೋಳ, ಗ್ರಾಮ ಪರಿಸರ ಮುಂತಾದ ನೆಲೆಗಳನ್ನು ಕಡಕೋಳ ಬರಹಗಳಿವೆ ಎಂಬುದರ ಸಾವಯವ ಸಂವಹನ ರೂಪದಲ್ಲಿ ಮುನ್ನುಡಿಯಿದೆ.

"ಕನ್ನಡದ ಬಗ್ಗೆ ಬರೆಯುವುದು ಎಂದರೆ ಬರಿ ದುಃಖ ಅಸಹಾಯಕತೆಗಳನ್ನು ಚರ್ವಿತ ಚರ್ವಣವಾಗಿ ಬರೆಯುವುದಲ್ಲ. ಸ್ವಾಭಿಮಾನ ಮತ್ತು ಸಂಭ್ರಮಗಳನ್ನು ಕನ್ನಡಿಗರ ಹೃದಯದಲ್ಲಿ ಬಿತ್ತುವ ಕೆಲಸವನ್ನು ಮಾಡಬೇಕು ನಾಡಿನ ಹೆಮ್ಮೆಯ ಚಹರೆಗಳನ್ನು ಸಾದೃಶ ಸ್ವರೂಪದಲ್ಲಿ ಬಿತ್ತಿ ಬೆಳೆಯಬೇಕು" ಕನ್ನಡ ನಾಡು ನುಡಿಯ ಬಗೆಗಿನ ಅಪಾರವಾದ ತಿಳುವಳಿಕೆಯುಳ್ಳ ಮುಕುಂದರಾಜು ಅವರ ಕಂಚಿನ ಕಂಠದ ಭಾಷಣಗಳು ವಿದ್ಯಾರ್ಥಿ ಜಗತ್ತನ್ನು ಪೊರೆದಿದೆ. ಕನ್ನಡ ಸಾಹಿತ್ಯ, ಸಮಾಜ ಹಾಗೂ ಸಾಂಸ್ಕೃತಿಕ ಜಗತ್ತನ್ನು ಒಳಗೊಂಡ ಕನ್ನಡವನ್ನು ಕುರಿತು ಮಾತನಾಡುವಾಗ ಮುಕುಂದರಾಜು ಅವರ ದನಿ ಮತ್ತು ಧ್ವನಿ ಎರಡೂ ಕನ್ನಡತನವನ್ನೇ ಪ್ರತಿಪಾದಿಸುತ್ತದೆ ಎಂಬುದಕ್ಕೆ ಹಲವು ಸಾಕ್ಷಿಗಳು ಅವರ ರೂಪಣೆಯ ಕನ್ನಡ ಜಗತ್ತಿನಲ್ಲಿವೆ. ಈ ನೆಲೆಯಲ್ಲಿಯೇ ಶ್ರೀನಿವಾಸ ಮೂರ್ತಿ ಅವರ ಪದ್ಯಗಳನ್ನು ಒಳಗೊಂಡು ಬರೆದಿರುವ ಕಾವ್ಯ ಪ್ರವೇಶಿಕೆ ಕನ್ನಡ ಅಭಿಮಾನ ಮತ್ತು ಸ್ವಾಭಿಮಾನವನ್ನು ಜಾಗೃತಿ ಪಡಿಸುವುದಷ್ಟೇ ಅಲ್ಲದೆ ಪ್ರತಿಯೊಬ್ಬನಲ್ಲೂ ಕನ್ನಡಿಸಬೇಕಾದ ಕನ್ನಡ ಪ್ರಜ್ಞೆಯನ್ನು ಬಿತ್ತಿ ಬೆಳೆಯುತ್ತದೆ. ಕೆಎಚ್ ವೆಂಕಟೇಶ್ ಅವರ ಪ್ರವಾಸ ಕಥನ ನಮ್ಮೊಳಗೆ ಇಳಿಯಲು ಬೇಕಾದ ಸಾಮಗ್ರಿಗಳನ್ನು ಮುನ್ನುಡಿ ಕನ್ನಡಿಯಂತೆ ಪ್ರತಿಫಲಿಸುತ್ತದೆ. ಯುರೋಪಿನ ಚರಿತ್ರೆ ಮತ್ತು ಇತಿಹಾಸ ಜರ್ಮನಿಯ ಮೂಲಕ ಕಟ್ಟಿಕೊಡುವ ವೆಂಕಟೇಶ್ ಅವರ ಬರಹ ಮುನ್ನುಡಿಯಲ್ಲಿ ಮತ್ತಷ್ಟು ದಿಕ್ಸೂಚಿಗೊಂಡಿದೆ.

ಹಾಲ್ಕುರಿಕೆ ಶಿವಶಂಕರವರ ನಾಟಕವನ್ನು ಕುರಿತು ಮುಕುಂದರಾಜು ಅವರು ಬರೆದಿರುವ ಮುನ್ನುಡಿ ರೂಪದ ಮಾತುಗಳಾದ 'ಕೋರೆಗಾವ್ ಅಲಕ್ಷಿತ ಚರಿತ್ರೆ'ಯ ಮೇಲೆ ಬೆಳಕನ್ನು ಮಾತ್ರವಲ್ಲದೆ ತಿಳುವಳಿಕೆಯನ್ನು ಕೂಡ ಚೆಲ್ಲುತ್ತದೆ. ನಾಟಕವೆಂದ ತಕ್ಷಣ ಸಾಹಿತ್ಯವನ್ನು ಮಾತ್ರ ಪರಿಗಣಿಸಿ ಅದನ್ನು ಕುರಿತಾದ ತಾತ್ವಿಕ ನಿಲುವುಗಳನ್ನು ಸ್ಪಷ್ಟಪಡಿಸುವ ಮುನ್ನುಡಿಗಳನ್ನು ಬಹಳಷ್ಟು ನಾವು ಓದಿದ್ದೇವೆ, ಆದರೆ ನಾಟಕ ಪ್ರಯೋಗ ಮತ್ತು ವಿನ್ಯಾಸವನ್ನು ತೃತೀಯ ಮೂಲಕ ಗ್ರಹಿಸುವ ಹಾಗೂ ರಂಗಕ್ರಿಯೆಯ ಮೂಲಕ ಸಾಹಿತ್ಯ ಪಠ್ಯ ಒಂದು ಅನಾವರಣಗೊಳ್ಳುವ ಕಲಾತ್ಮಕ ಅಭಿವ್ಯಕ್ತಿಯನ್ನು

ಕುರಿತು ಬಂದಿರುವ ಬರಹಗಳು ತುಂಬಾ ಕಡಿಮೆ. ಸ್ವಯಂ ನಾಟಕಕಾರರು ಆಗಿರುವ ಮುಕುಂದರಾಜು ಅವರು ರಂಗಭೂಮಿಯ ಆಯಾಮಗಳ ಮೂಲಕವೇ ನಾಟಕ ಪಠ್ಯವೊಂದನ್ನು ನೋಡುವ ಮತ್ತು ಅದನ್ನು ವ್ಯಾಖ್ಯಾನಿಸುವ ಕ್ರಮ ನಿಜಕ್ಕೂ ಭಿನ್ನ ಹಾಗೂ ಅನುಸರಣೀಯ. ಈ ಹಾದಿ ಕನ್ನಡ ನಾಟಕ ಮತ್ತು ರಂಗಭೂಮಿಯನ್ನು ಗ್ರಹಿಸಲು ಮತ್ತು ಅರ್ಥ ಮಾಡಿಕೊಳ್ಳಲು ಬೇಕಾದ ಸಮರ್ಥವಾದ ಹಾದಿಯೇ ಆಗಿದೆ. ಸಿದ್ದ ಹಾಗೂ ಜಡ್ಡು ಕಟ್ಟಿದ ಮಾದರಿಗಳಿಂದ ಆಚೆ ವಿನೂತನ ಚಲನೆ ಕನ್ನಡ ನಾಟಕಕ್ಕೆ ಬೇಕಿದೆ ಎಂಬುದನ್ನು ಪ್ರಯೋಗಶೀಲ ರಂಗಕರ್ಮಿ ಶಿವಶಂಕರ್ ಅವರನ್ನು ಮತ್ತವರ ಕೃತಿಯನ್ನು ಗ್ರಹಿಸಿ ಮುಕುಂದರಾಜು ಅವರು ಬರೆದಿರುವ ಮುನ್ನುಡಿ ಅತ್ಯಂತ ನಿಖರ ಹಾಗೂ ಪ್ರಯೋಗಮುಖಿಯಾಗಿದೆ. ಅಸ್ಪೃಶ್ಯ ಮತ್ತು ಅಂಚಿಗೆ ತಳ್ಳಲ್ಪಟ್ಟವರ ಹೋರಾಟದ ಚರಿತ್ರೆಯನ್ನು ದಾಖಲಿಸಿರುವ ನಾಟಕ ಸಾಮಾಜಿಕ ಬದಲಾವಣೆಯ ಹಾಗೂ ಆತ್ಮ ವಿಮರ್ಶೆಯ ಪ್ರಜ್ಞೆಯನ್ನು ನಮ್ಮೊಳಗೆ ಬಿತ್ತಿಕೊಳ್ಳಬೇಕಾದ ಹಾದಿಯನ್ನು ಕಾಣಬೇಕೆಂಬುದನ್ನು ಮುನ್ನುಡಿ ಸ್ಪಷ್ಟಪಡಿಸುತ್ತದೆ.

ಹಳಗನ್ನಡ ಪಠ್ಯಗಳನ್ನು ಅತ್ಯಂತ ಸಹಜವಾಗಿ ತಮ್ಮ ಮಾತು ಹಾಗೂ ಬರಹಗಳ ಮೂಲಕ ಸಹೃದಯ ಲೋಕಕ್ಕೆ ದಾಟಿಸುವ ಕಾವ್ಯ ಧಾರಣ ಮನಸ್ಥಿತಿ ಕವಿಗಳಾಗಿರುವ ಮುಕುಂದರಾಜು ಅವರು ಕುಮಾರವ್ಯಾಸನನ್ನು ಕುರಿತು ಮಾತನಾಡುವ ಪ್ರತಿ ಮಾತುಗಳು ಕಾವ್ಯಸತ್ವವನ್ನು ಕನ್ನಡ ಓದುಗ ಹಾಗೂ ಕೇಳುಗ ಲೋಕದಲ್ಲಿ ಬಿತ್ತುತ್ತಲೇ ಬಂದಿರುವುದನ್ನು ಗಮನಿಸಬಹುದು. ಈ ಕೃತಿಯಲ್ಲಿ ಕುಮಾರವ್ಯಾಸನನ್ನು ಉಲ್ಲೇಖಿಸುತ್ತಾ ಅನೇಕ ಕವಿಗಳನ್ನು ಕನ್ನಡ ಕಾವ್ಯದ ಭಿನ್ನ ಆಯಾಮಗಳಲ್ಲಿ ಪ್ರಸ್ತಾಪಿಸುತ್ತಾ ರವಿ ತೊಂಡೆಗೆರೆಯವರ ಕಾವ್ಯವನ್ನು ಕುರಿತು ಮಾತನಾಡುವುದು ಪರಂಪರೆಯನ್ನು ವರ್ತಮಾನದ ಮೂಲಕ ನೋಡುತ್ತಲೇ ಕನ್ನಡ ಕಾವ್ಯದ ಅನನ್ಯತೆಯನ್ನು ಕಟ್ಟಿಕೊಡುವ ಸೂಕ್ಷ್ಮತೆ ಕವಿಗಳಾದ ಮುನ್ನುಡಿಕಾರರಿಗಿದೆ. ಈ ಸೂಕ್ಷ್ಮ ಮುಕುಂದರಾಜು ಅವರು ಬೇರೆ ಬೇರೆ ಕವಿತಾ ಸಂಕಲನಗಳಿಗೆ ಬರೆದಿರುವ ಮುನ್ನುಡಿಗಳು ಪ್ರಕಟಪಡಿಸುತ್ತವೆ.

ಕವಿತೆ, ನಾಟಕ ಸಾಹಿತ್ಯ, ರಂಗಭೂಮಿ, ಜೀವನ ಚಿತ್ರ, ಕಾದಂಬರಿ, ಮಕ್ಕಳ ಸಾಹಿತ್ಯ, ವೃತ್ತಿಜೀವನ, ಶೈಕ್ಷಣಿಕ ಸಂಘಟನೆ, ಅಧ್ಯಾಪನ, ಸಮಾಜ, ರಾಜಕಾರಣ, ಧರ್ಮ, ಮತೀಯತೆ, ಮಾನವೀಯತೆ, ಜೀವನ ಪ್ರೇಮ ಹೀಗೆ ಮುಂತಾದ ಆಯಾಮಗಳನ್ನು ಜೀವ ಪರವಾಗಿ ನೋಡುತ್ತಾ, ತಾನು ಕಂಡು ಒಳಗಣ್ಣನ್ನು ಸಹೃದಯ ಲೋಕಕ್ಕೂ ತೋರುವ ಬರಹಗಳನ್ನು ಬರೆಯುತ್ತಾ ಕನ್ನಡದ ಓದು ಪ್ರಜ್ಞೆಯನ್ನು ವಿಸ್ತರಿಸಿದ ಹಿರಿಯ ಲೇಖಕರು ಮುಕುಂದರಾಜು ಅವರು. ಸುದೀರ್ಘ ಕನ್ನಡ ಪಾಠ ಮಾಡಿದ ಅನುಭವ, ಚರಿತ್ರೆ ಮತ್ತು ರಾಜಕಾರಣ ಹೇಗೆಲ್ಲಾ ಸಂಕೀರ್ಣಗೊಳಿಸಿ ಜನವಿರೋಧಿಯಾದ ಅಧಿಕಾರವನ್ನು ಅನುಭವಿಸುತ್ತಿದೆ ಎಂಬ ಧೋರಣೆಯನ್ನು ತಮ್ಮ ಪ್ರತೀ ಮಾತುಬರಹ ಹಾಗೂ ಸೃಜನಶೀಲ ಅಭಿವ್ಯಕ್ತಿಯಲ್ಲಿ ಕಾಣಬಹುದು. ಸಮಾನತೆ ಎಂಬ ಸಶಕ್ತ ಸಾಧ್ಯತೆ ಲೋಕಕ ಕಟ್ಟುವ ಶಕ್ತಿಯೇ ಆಗಿದೆ ಎಂಬುದನ್ನು ತಾವು ಒಳಗೊಳ್ಳುವ ಸಾಹಿತ್ಯ ಹಾಗೂ ಸಾಮಾಜಿಕ ಪಠ್ಯಗಳಲ್ಲಿ ಕಾಣುವ, ಆ ಮೂಲಕ ತನ್ನನ್ನು ತಾನು ಅನ್ವೇಷಿಸಿಕೊಳ್ಳುವ ಸಂವೇದನಾಶೀಲತೆ ಮುಕುಂದರಾಜು ಅವರು ಎದುರಾಗುವ ಲೋಕಕ್ಕೂ ಇದೆ ಎಂಬುದನ್ನು ಅವರ

ಓದು ಮತ್ತು ಬರಹ ಹಾಗೂ ಅಭಿವ್ಯಕ್ತಿಯಲ್ಲಿ ಪ್ರಕಟಗೊಳ್ಳುತ್ತದೆ. ಈ ಲೋಕದೃಷ್ಟಿ ಅವರು ಬರೆದಿರುವ ಮುನ್ನುಡಿಗಳಲ್ಲೂ ಬೆಳಕನ್ನು ಕಂಡಿರುವುದನ್ನು ಗಮನಿಸಬಹುದು.

ಸಾಮಾಜಿಕ ಜಾಲತಾಣಗಳು ಅತ್ಯಂತ ವಿಶಾಲ ಜನಪ್ರಿಯತೆಯನ್ನು ಪಡೆದಿರುವ ಈ ಕಾಲದಲ್ಲಿ ಎಲ್ಲವೂ ತಕ್ಷಣದ ಪ್ರತಿಕ್ರಿಯೆಯಾಗಿ ಬಂದು ಹೋಗಿಬಿಡುತ್ತವೆ. ಕ್ರಿಯೆ ಪ್ರತಿಕ್ರಿಯೆಗಳೆರಡು ಪುಸ್ತಕಕ್ಕೆ ಬಾರದೆ ಮೊಬೈಲ್ ಪರದೆಯಲ್ಲೇ ಜಾರಿ ಬಿಡುವ ಈ ಸಂಕೀರ್ಣ ಸಮಯದಲ್ಲೂ ಸಾಮಾಜಿಕ ಸಮಾನತೆ, ಸೃಜನಶೀಲ ಬದ್ಧತೆ, ಸಾಹಿತ್ಯ ಕೃತಿಯೊಂದರ ಅಗತ್ಯತೆಯನ್ನು ಕುರಿತು ಬರೆದಿರುವ ಮುನ್ನುಡಿಗಳು ಕೃತಿ ಮತ್ತು ಕೃತಿಕಾರನ ಅಗತ್ಯಗಳು ಮಾತ್ರವಾಗಿರದೆ ಅದು ಸಾಮಾಜಿಕ ಲೋಕದ ಅಗತ್ಯವೂ ಆಗಿರುವುದನ್ನು ಮುಕುಂದರಾಜು ಅವರ ಮುನ್ನುಡಿಗಳನ್ನು ಓದಿದಾಗ ಗಮನಿಸಬಹುದು. ಬರಹಗಾರರಾಗಿ, ವಿಮರ್ಶಕರಾಗಿ, ಸಾಮಾಜಿಕ– ಸಾಂಸ್ಕೃತಿಕ ಕನ್ನಡ ಪರ, ಸಮಾಜ ಪರ ವಕ್ತಾರಿಕೆ ನಿಜಕ್ಕೂ ಕನ್ನಡ ಸಮಕಾಲೀನ ಜಾಯಮಾನಕ್ಕೆ ಅಗತ್ಯವಾದ ಜೀವಪೋಷಕವಾದ ಗುಣಗಳಾಗಿವೆ. ಗುರುಸಮಾನರಾದ ಮುಕುಂದರಾಜು ಅವರ ಮುನ್ನುಡಿಗಳ ಸಂಗ್ರಹಕ್ಕೆ ಮುನ್ನುಡಿ ಬರೆಯುವ ಅವಕಾಶ ಒದಗಿ ಬಂದಿದ್ದು ಕನ್ನಡದ ಹೊಸತೊಂದು ಚಿಗುರುವ ಮತ್ತು ಮೊಳೆಯುವ ಅವಕಾಶವೇ ಆಗಿದೆ ಎಂದು ನಂಬುತ್ತೇನೆ. ಬೀಜವನ್ನು ನೆಲಕ್ಕೆ ಚೆಲ್ಲಬೇಕು. ಧಾರಣಾ ಶಕ್ತಿಯುಳ್ಳ ಬೀಜ ಮೊಳೆತು ಸಸಿಯಾಗಿ ಬೆಳೆಯುವುದು, ಉಳಿದವು ಇಲ್ಲವಾಗುವವು. ಈ ಪ್ರಜ್ಞೆ ಮುಕುಂದ ರಾಜು ಅವರ ಮುನ್ನುಡಿಗಳಲ್ಲಿ ಕೇಂದ್ರ ಪ್ರಜ್ಞೆಯಾಗಿ ಅನವರಣಗೊಂಡಿದೆ. ಈ ದೃಷ್ಟಿಯಲ್ಲಿ ಶಕ್ತಿ ಮತ್ತು ಮಿತಿಗಳನ್ನು ಗುರುತಿಸುತ್ತಲೇ ಕನ್ನಡ ಕೃತಿಯೊಂದರ ಪರಿಚಯವನ್ನು ಕನ್ನಡ ಸಮಾಜಕ್ಕೆ ಮಾಡುವ ಗುರುತರವಾದ ಜವಾಬ್ದಾರಿಯನ್ನು ನಿಭಾಯಿಸುವುದು ಅಭಿನಂದನೀಯ.

**ಪರಾಮರ್ಶನ ಗ್ರಂಥಗಳು:**

1. ಕಾವ್ಯಾರ್ಥ ಚಿಂತನ – ಡಾ. ಜಿ.ಎಸ್ ಶಿವರುದ್ರಪ್ಪ, 2010, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
2. ಕಾವ್ಯ ಪ್ರತಿಮೆ – ಡಾ. ಎನ್ ಎಸ್ ಲಕ್ಷೀನಾರಾಯಣ ಭಟ್ಟ, 2010, ಅಂಕಿತ ಪುಸ್ತಕ, ಬೆಂಗಳೂರು.
3. ಕನ್ನಡ ಕಾವ್ಯ ಮೀಮಾಂಸೆ – ಡಾ. ಎಸ್ ನಟರಾಜ ಬೂದಾಳು, 2020, ಪ್ರಸಾರಾಂಗ, ಕನ್ನಡ ವಿವಿ ಹಂಪಿ.
4. ವೈಶಂಪಾಯನ ತೀರ – ಡಾ. ಎಲ್ ಎನ್ ಮುಕುಂದರಾಜ್, 1998, ಎಚ್‌ವಿಎಸ್ ಪಬ್ಲಿಕೇಷನ್ಸ್ ಬೆಂಗಳೂರು.
5. ದೇಶಕೋಶ ದಾಸವಾಳ – ಡಾ. ಎಲ್ ಎನ್ ಮುಕುಂದರಾಜ್, 1992, ಸೂರ್ಯ ಪ್ರಕಾಶನ, ತುಮಕೂರು.